ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 11.03.2025.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಂ. ಪಿ.ಇ. ವಕೀಲರಿಂದಃ

ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಮ್ಮ ವಕೀಲರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ನನ್ನ ಅಣ್ಣ ಇರುತ್ತಾರೆ. 3ನೇ ಪ್ರತಿವಾದಿ ಮಗಳಾದ ವಿಮಲಾಬಾಯಿಯನ್ನು 4ನೇ ಪ್ರತಿವಾದಿ ಶಿವಾನಂದನಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ಅಜ್ಜನ ಕಡೆಯಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ಮುಂದುವರೆದು ದಾವಾ ಸ್ವತ್ತುಗಳು ನನ್ನ ತಂದೆ ಕಡೆಯಿಂದ ಬಂದಿರುತ್ತವೆ ಎಂದು

ನುಡಿಯುತ್ತಾರೆ. ದಾವಾ ಸ್ವತ್ತುಗಳು ನನ್ನ ತಂದೆಯಿಂದ ನನ್ನ ತಾಯಿ ಹೆಸರಿನಲ್ಲಿ ಆಗಿರುತ್ತವೆ, ಆದರೆ ನಮ್ಮ ಹೆಸರುಗಳಲ್ಲಿ ಆಗಿರುವುದಿಲ್ಲ.

ನನ್ನ ತಂದೆ ಬೀರಣ್ಣನ ಎಲ್ಲ ಮಕ್ಕಳು ದಾವಾ ಆಸ್ತಿಗಳಿಗೆ ವಾರಸುದಾರರು ಇರುತ್ತಾರೆ ಎಂದರೆ ಸರಿ. ನಾನು ನಮ್ಮ ಕುಟುಂಬದ ವಂಶಾವಳಿ ತೋರಿಸಲು ಸಂಬಂಧಪಟ್ಟ ಅಧಿಕಾರಿಗಳಿಂದ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. 4ನೇ ಪ್ರತಿವಾದಿ ತಾಯಿ ಕಮಲಾಬಾಯಿ ರವರು ಆತ ಚಿಕ್ಕವನು ಇರುವಾಗಲೇ ತಿರಿಕೊಂಡಿರುತ್ತಾರೆ ಎಂದರೆ ಸರಿ, ಆದರೆ ನಾನು ನೋಡಿಲ್ಲ. ಸದರಿ ಕಮಲಾಬಾಯಿ ನಮ್ಮೆಲ್ಲರಿಗಿಂತ ದೊಡ್ಡವಳು ಇರುತ್ತಾರೆ ಎಂದರೆ ಸರಿ. ನಾನು ಎಲ್ಲರಿಗಿಂತ ಚಿಕ್ಕವನು ಎಂದರೆ ಸರಿ. ನಾನು ಚಿಕ್ಕವನು ಇದುದ್ದರಿಂದ ಕಮಲಾಬಾಯಿ ತಿರಿಕೊಂಡಿದ್ದನ್ನು ನಾನು ನೋಡಿಲ್ಲ ಎಂದರೆ ಸರಿ. ಸದರಿ ಕಮಲಾಬಾಯಿಯನ್ನು ಯಳವಂತಿಗಿ ಗ್ರಾಮದ ಅಂಬಾರಾಯ ನಾಯಕೋಡಿ ರವರಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಇರುವವರೆಗೂ ಅವರೇ ಮನೆಯ ಮುಖ್ಯಸ್ಥ ಇದ್ದರು ಎಂದರೆ ಸರಿ. ನನ್ನ ತಂದೆ 4ನೇ ಪ್ರತಿವಾದಿ ವಿರುದ್ಧ ನೋಂದಣಿ ಕ್ರಯ ಕರಾರು ಪತ್ರ ಮಾಡಿಕೊಟ್ಟದ್ದನ್ನು ರದ್ದುಪಡಿಸುವ ಸಲುವಾಗಿ ಒಂದು ಕೇಸ್‌ನ್ನು ಹಾಕಿದ್ದರು ಎಂದರೆ ಸರಿ. 1 ರಿಂದ 3ನೇ ಪ್ರತಿವಾದಿಗಳು ನನ್ನ ವಿರುದ್ಧ ಯಾವುದೇ ವೈರತ್ವ ಹೊಂದಿರಲಿಲ್ಲ ಎಂದರೆ ಸರಿ. ಮೇಲೆ ಹೇಳಿದ ಕಮಲಾಬಾಯಿ ನನ್ನ ಕಾಸಾ ಅಕ್ಕ ಎಂದರೆ ಸರಿ. ಸಾಕ್ಷಿ ನಾನು ಚಿಕ್ಕವನು ಇದ್ದೆ ಅವಳ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ವಕೀರಿಗೆ ಕಮಲಾಬಾಯಿ ನನ್ನ ಅಕ್ಕ ಅವಳು ನಾನು ಚಿಕ್ಕವನು ಇರುವಾಗಲೇ ಸರಿಹೋಗಿರುತ್ತಾಳೆ ಎಂದು ನನ್ನ ವಕೀಲರಿಗೆ ಹೇಳಿರುತ್ತೇನೆ. ನಾನು ಹೇಳಿದಂತೆ ನನ್ನ ವಕೀಲರು ವಾದಪತ್ರ ಬರೆದಿರುತ್ತಾರೆ. 4ನೇ ಪ್ರತಿವಾದಿ ಕಮಲಾಬಾಯಿಯ ಒಬ್ಬನೇ ಮಗ ಎಂದರೆ ಸರಿ.

ವಂಶಾವಳಿಯಲ್ಲಿ ತೋರಿಸಿದ ಶಿವಪ್ಪ ನನ್ನ ತಂದೆ ಅಲ್ಲ ಎಂದರೆ ಸರಿ, ನನ್ನ ತಂದೆ ಹೆಸರು

ಬೀರಣ್ಣ ಇರುತ್ತದೆ. ಸದರಿ ವಾದಪತ್ರದ ಜೊತೆ ಇರುವ ವಂಶಾವಳಿಯಲ್ಲಿ ಕಮಲಾಬಾಯಿ ನನ್ನ ಅಕ್ಕ ಅವಳು ಚಿಕ್ಕವಳು ಇರುವಾಗಲೇ ತಿರಿಕೊಂಡಿರುತ್ತಾಳೆ ಎಂದು ತೋರಿಸಿಲ್ಲ. ಅದೇ ರೀತಿ 4ನೇ ಪ್ರತಿವಾದಿ ಕಮಲಾಬಾಯಿ ಮಗ ಎಂದು ತೋರಿಸಿಲ್ಲ ಎಂದರೆ ಸರಿ. ಸದರಿ ಕಮಲಾಬಾಯಿಯನ್ನು ವಂಶಾವಳಿಯಲ್ಲಿ ತೋರಿಸಿದರೆ ಅವಳಿಗೂ ಕೂಡಾ ಒಂದು ಭಾಗ ಹೋಗುತ್ತದೆ ಎಂಬ ಉದ್ದೇಶದಿಂದ, ಅವಳನ್ನು ವಂಶಾವಾಳಿಯಲ್ಲಿ ತೋರಿಸಿಲ್ಲ ಎಂದರೆ ಸರಿ. 4ನೇ ಪ್ರತಿವಾದಿ ಈ ಪ್ರಕರಣದಲ್ಲಿ ಏನು ಉತ್ತರ ಕೊಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಿಂದ 3ರಲ್ಲಿ ನನ್ನ ಮತ್ತು ನನ್ನ ತಂದೆ ಬೀರಣ್ಣ ಹಾಗೂ ನನ್ನ ಅಣ್ಣ ಸಾಯಬಣ್ಣ ರವರ ಹೆಸರುಗಳು ಇರುತ್ತವೆ ಎಂದರೆ ಸರಿ.

ನನ್ನ ತಂದೆ ತಿರಿಕೊಂಡ ನಂತರ ನನ್ನ ತಾಯಿ ಅಂಬವ್ವ 2ನೇ ಪ್ರತಿವಾದಿ ಹೆಸರು ನಿಪಿ-6ರಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ಅಕ್ಕ ಕಮಲಾಬಾಯಿಗೂ ಕೂಡಾ ದಾವಾ ಸ್ವತ್ತಿನಲ್ಲಿ ಒಂದು ಭಾಗ ಇದೆ ಎಂದರೆ ಸರಿಯಲ್ಲ. ಕಮಲಾಬಾಯಿ ತಿರಿಕೊಂಡ ಕಾರಣ ಅವಳಿಗೆ ದಾವಾ ಆಸ್ತಿಯಲ್ಲಿ ಭಾಗ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**